Sri H. SIDDAVEERAPPA.—In fact, we have been taking lot of of precautions for the last several months. Most of the villages have been covered and inoculations have taken place. Now, in order to avoid possible out break of epidemics due to summer, we have already given so many mobile hospitals For each district we have given at the rate of two or three mobile hospitals and each such hospital is manned by two doctrs and other auxiliary staff. They go from village to village and wherever it is necessary they attend to the patients at the village level itself, instead of the patients going to the hospital. We have stocked the necessary medicines and injections and all other possible precautions have been taken.

ಶ್ರೀ ಆರ್.ಎಸ್. ಪಾಟೀಲ್ — ಈ ಕ್ಷೇತ್ರದಲ್ಲಿ 32 ಜನರು ಸತ್ತಿರಬೇಕಾದರೆ ಪರಿಸ್ಥಿತಿ ಉಗವಾಗಿರಬೇಕೆಂದು ಕಾಣುತ್ತದೆ, ಅಲ್ಲಿ ಕಾಲರಾ ಅಟ್ಯಾಕ್ ಆಗಿದೆ ಎಂದು ತಿಳಿದುಬಂದ ಎಷ್ಟು ದಿವಸಗಳಲ್ಲಿ ಕಾಲ ನಿರೋಧಕ ಸೂಜಿ ಮದ್ದುಗಳನ್ನು ಹಾಕಲು ಪ್ರಯತ್ನ ಮಾಡಲಾಯಿತು ಮತ್ತು ಅಲ್ಲಿ ಒಟ್ಟು ಎಷ್ಟು ಜನರಿಗೆ ಈಕಾಲರಾ ರೋಗ ಅಟ್ಯಾಕ್ ಆಗಿದೆ ಎಂದು ವರದಿ ಬಂದಿದೆ ?

Sri H. SIDDAVEERAPPA.—There were 141 cases of attacks in that constituency and out of 141 cases, so many deaths have taken place. This gastro enteritis has been there from the months of June 1972. Of late it has been completely under control. The last case of attack was in the month of February. That was only one case and there was no death.

Taxes Realised in Bangalore City

147. Sri K. SIRRAMULU (Gandhinagar).—

Will the Minister for Finance be pleased to state :—

(*a*) the annual income derived to the State Government through various taxes in Banglore City ;

(*b*) out of this, the amount spent for slum clearances and public developmental work ?

Sri M. Y. GHORPADE (Minister for Finance).—

(*a*) On an average there is an income of Rs. 3,364 lakhs per annum (As separate figures in respect ot Bangalore City toward Motor Vehicles Taxes are not maintained that amount is not included in the above figures).

(*b*) There is no relation between the taxes realised by the Government in the City and the amount spent in respect of slum clearances and other public developmental works.

ಶ್ರೀ ಕೆ. ಶ್ರೀರಾಮುಲು.—ತಮ್ಮ ಉತ್ತರದಲ್ಲಿ 3364 ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಮತ್ತು ಇದರಲ್ಲಿ ವೋಟಾರು ವಾಹಾಗಳ ತೆರಿಗೆ ಸೇರಿ ಎಂದು ಹೇಳಿದ್ದೀರಿ. ಅದನ್ನು ಸೇರಿಸಿದರೆ ಸುಮಾರು 70 ಕೋಟಿ ರೂಪಾಯಿಗಳ ವರಮಾನ ಬೆಂಗಳೂರು ನಗರದಿಂದಲೇ ಬರುತ್ತದೆಂದು ನಾನು ಹೇಳುತ್ತೇನೆ ; ತಮ್ಮ ಅಭಿಪ್ರಾಯವೇನು ?

† ಶ್ರೀ ಎಂ. ವೈ. ಘೋರ್ಪಡೆ.—70 ಕೋಟಿ ರೂಪಾಯಿ ಆಗುವುದಿಲ್ಲ. ಬೆಂಗಳೂರು ಜಿಲ್ಲೆಯಿಂದ ಮೋಟಾರು ವಾಹನಗಳ ತೆರಿಗೆಯಿಂದ ಬರುವ 6 ಕೋಟಿ 17 ಲಕ್ಷ ರೂಪಾಯಿಗಳನ್ನು ಸೇರಿಸಿದರೆ ಒಟ್ಟು 40 ಕೋಟಿ ರೂಪಾಯಿಗಳಾಗಬಹುದು. ಇದರಲ್ಲಿ ಸೇಲ್ಸ್‌ಟ್ಯಾಕ್ಸ್‌ನಿಂದ 25 ಕೋಟಿ, ಸ್ಟ್ಯಾಂಪ್ ಡ್ಯೂಟಿಯಿಂದ ಒಂದು ಕೋಟಿ 90 ಲಕ್ಷ, ಎಕ್ಸೈಜ್‌ನಿಂದ 2.19 ಕೋಟಿ, ಎಲೆಕ್ಟ್ರಿಸಿಟಿಯಿಂದ 1.40ಕೋಟಿ ರೂಪಾಯಿ ಈ ರೀತಿ ಬೇರೆ ಬೇರೆ ಬಾಬುಗಳಿಂದ ಬರುವುದನ್ನು ಸೇರಿಸಿದರೆ 3364 ಲಕ್ಷ ರೂಪಾಯಿಗಳಾಗುತ್ತದೆ. ಇದಕ್ಕೆ ಬೆಂಗಳೂರು ಜಿಲ್ಲೆಯಿಂದ ಬರುವ ಮೋಟಾರ್ ವಾಹನಗಳ ತೆರಿಗೆಯನ್ನು ಸೇರಿಸಿದರೆ 40 ಕೋಟಿ ರೂಪಾಯಿ ಆಗಬಹುದು.

ಶ್ರೀ ಕೆ. ಶ್ರೀರಾಮುಲು.—ಈ ತೆರಿಗೆಗಳಿಗೂ ಬೆಂಗಳೂರು ನಗರದ ಅಭಿವೃದ್ಧಿ ಕೆಲಸಗಳಿಗೂ ಸಂಬಂಧವಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಬೆಂಗಳೂರಿನಲ್ಲಿ ಶಾಲೆಗಳಿಗಾಗಲೀ, ರಸ್ತೆಗಳಿಗಾಗಿ ಯಾಗಲೀ, ಆಸ್ಪತ್ರೆಗಳಿಗಾಗಲೀ, ಕೊಳಚೆ ಪ್ರದೇಶಗಳ ನಿರ್ಮೂಲೀಕರಣಕ್ಕಾಗಲೀ ತೆರಿಗೆಯಿಂದ ಬರುವ ಹಣವಲ್ಲದೆ ಬೇರೆ ಹಣವನ್ನು ಖರ್ಚು ಮಾಡಲಾಗುತ್ತಿದೆಯೇ ?

ಶ್ರೀ ಎಂ. ವೈ. ಘೋರ್ಪಡೆ.—ತಾವು ಕೊಳಚೆ ಪ್ರದೇಶಗಳ ನಿರ್ಮೂಲೀಕರಣದ ಬಗ್ಗೆ ಕೇಳಿದ್ದೀರಿ. ಆ ಬಗ್ಗೆ ಏನೇನು ಸ್ಕೀಮುಗಳಿವೆ ಎಂಬುದು ತಮಗೂ ಗೊತ್ತಿದೆ. ಇದಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ತೆರಿಗೆಯಿಂದ ಬರುವ ಹಣಕ್ಕೂ ಸ್ಲಮ್ ಕ್ಲಿಯರೆನ್ಸ್‌ಗೆ ಮತ್ತು ಬೇರೆಬೇರೆ ಡೆವಲಪ್‌ಮೆಂಟ್ ಕೆಲಸಗಳಿಗೆ ಖರ್ಚು ಮಾಡುವ ಹಣಕ್ಕೂ ಸಂಬಂಧವಿಲ್ಲ. ಬೆಂಗಳೂರು ನಗರ ಈ ಮಟ್ಟಕ್ಕೆ ಬರಬೇಕಾದರೆ ಇದುವರೆಗೆ ಸರ್ಕಾರದವರು ಬಹಳಷ್ಟು ಹಣವನ್ನು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಖರ್ಚು ಮಾಡಿರುವುದೇ ಕಾರಣ: ಇದರಿಂದ ಈಗ ಟ್ಯಾಕ್ಸ್ ಕೊಡುವ ಶಕ್ತಿ ಬೆಂಗಳೂರು ನಗರಕ್ಕೆ ಹೆಚ್ಚು ಇದ್ದರೆ ಅದನ್ನು ಬೇರೆ ಪ್ರದೇಶಗಳನ್ನು ಡೆವಲಪ್ ಮಾಡುವ ನಲುವಾಗಿ ಖರ್ಚು ಮಾಡಿದರೆ ಅದರಲ್ಲಿ ತಪ್ಪೆನೂ ಇಲ್ಲ, ಈ ಟ್ಯಾಕ್ಸ್‌ನಿಂದ ಬರುವ ಹಣವನ್ನು ರಾಜ್ಯದ ಎಲ್ಲ ಭಾಗಗಳೂ ಮುಂದೆ ಬರುವ ರೀತಿಯಲ್ಲಿ ಉಪಯೋಗ ಮಾಡಬೇಕಾಗುತ್ತದೆ. ಇಲ್ಲದೆಹೋದರೆ ಒಬ್ಬ ಶ್ರೀಮಂತ ಕೊಟ್ಟ ಟ್ಯಾಕ್ಸ್ ಹಣವನ್ನು ಅವನ ಕಾಂಪೌಂಡ್‌ನಲ್ಲಿಯೇ ಖರ್ಚು ಮಾಡಬೇಕೆಂದರೆ, ಅದರಿಂದ ಸಮಾಜವಾದವನ್ನು ಜಾರಿಗೆ ತರುವುದು ಕಷ್ಟವಾಗುತ್ತದೆ. ಮತ್ತು ಅದು ಸಮಾಜವಾದದ ತತ್ವಕ್ಕೆ ವಿರುದ್ಧವಾಗುತ್ತದೆ. ಸ್ಲಮ್ ಕ್ಲಿಯರೆನ್ಸ್‌ಗಾಗಿ ಇನ್ನೂ ಹೆಚ್ಚು ಹಣ ಖರ್ಚಾಗಬೇಕೆಂದು ತಾವು ಹೇಳುವುದಾದರೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಬೆಂಗಳೂರಿನಿಂದ ಬರುವ ತೆರಿಗೆಯೆಲ್ಲವನ್ನೂ ಬೆಂಗಳೂರಿನಲ್ಲಿಯೇ ಖರ್ಚು ಮಾಡಬೇಕೆಂಬ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ. ಆ ರೀತಿ ಯಾವ ಸರ್ಕಾರವೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ಆ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಕೇಳಿಲ್ಲ. ಇತರ ಕಡೆಯ ಟ್ಯಾಕ್ಸನ್ನು 25 ವರ್ಷಗಳಿಂದ ಬೆಂಗಳೂರಿನವರಿಗೆ ಸರ್ಕಾರದವರು ಏನಾದರೂ ಖರ್ಚು ಮಾಡಿದ್ದಾರೆಯೇ ? ಒಂದು ವೇಳೆ ಆ ರೀತಿ ಸರ್ಕಾರದವರು ಖರ್ಚು ಮಾಡಿದ್ದರೆ ಯಾವ ಅಭಿವೃದ್ಧಿಗೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎನ್ನುವ ವಿವರಣೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಇಂಥಾ ಪ್ರಶ್ನೆಗೆ ಉತ್ತರ ಹೇಳುವುದಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಕಟ್ಟಡ, ನೀರು ಸರಬರಾಜು, ಕಾರ್ಖಾನೆಗಳು ಇತ್ಯಾದಿಗಳನ್ನು ಲೆಕ್ಕ ಹಾಕಿದರೆ ಹೆಚ್ಚು ಪ್ರಮಾಣದಲ್ಲಿ ಖರ್ಚಾಗಿದೆ ಎನ್ನುವುದು ಎಲ್ಲರಿಗೂ ಕಣ್ಣಿಗೆ ಕಾಣಿಸುತ್ತದೆ. ಅದನ್ನು ಪಟ್ಟಿ ಮಾಡಿ ನಾನು ತಂದಿಲ್ಲ.

Desilting the Gondi Channel

194. ABDUL KUDDUS ANWAR (Bhadravathi).—

Will the Minister of State for Major Irrigation be pleased to state :—

(*a*) the area that is irrigated by Gondi Right and Left Bank Channel of Bhadravathi Taluk ;